ಶ್ರೀ ಚೌಡ ರೆಡ್ಡಿ.—ಇದರ ವಿಚಾರವಾಗಿಯೇ ನಾನು ಅನೇಕ ದೂರುಗಳನ್ನು ತಾಲೂಕು ಆಫೀಸರ್‌ಗೂ ಕಳುಹಿಸಿದ್ದೇನೆ. ಇದರ ಬಗ್ಗೆ ನನ್ನ ಹತ್ತಿರ ನಿರ್ದಿಷ್ಟವಾದ ರೆಕಾರ್ಡುಗಳೂ ಇವೆ ಹಣ ಕೊಟ್ಟರೆ ಕೆಲಸ ಮಾಡುತ್ತೇವೆನ್ನುವ ವಿಲೇಜ್ ಅಕೌಂಟೆಂಟರ ಅವ್ಯವಹಾರಗಳು ಜಾಸ್ತಿಯಾಗಿತ್ತಿವೆ ತಮ್ಮ ಉತ್ತರದಲ್ಲಿ ತಿಳಿಸಿರುವಂತೆ, ಡಿವಿಷನಲ್ ಕಮಿಷನರ್ ಆಫೀಸಿನಲ್ಲಿ ಎಷ್ಟು ವರ್ಷದಿಂದ ರೆಕಾರ್ಡುಗಳು ಪೆಂಡಿಂಗ್ ಇವೆ?

ಶ್ರೀ ಬಿ. ಬಸವಲಿಂಗಪ್ಪ.—ಕೆಳ ದರ್ಜೆಯ ನೌಕರರು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಲಂಚರುಷುವತ್ತುಗಳಿಗೆ ಆಸೆಪಟ್ಟು ಜನಗಳಿಗೆ ತೊಂದರೆ ಮಾಡುತ್ತಿದ್ದಾರೆನ್ನುವುದು ನನ್ನ ಗಮನಕ್ಕೆ ಬಂದಿದೆ. ಆದರೆ ನಿರ್ದಿಷ್ಟವಾದ ದೂರುಗಳು ನನ್ನ ಗಮನಕ್ಕೆ ಬರುತ್ತಿಲ್ಲ. ಮಾನ್ಯ ಸದಸ್ಯರು ಗಳು ನಿರ್ದಿಷ್ಟವಾದ ನಿದರ್ಶನಗಳನ್ನು ನನ್ನ ಗಮನಕ್ಕೆ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಈ ವಿಷಯದಲ್ಲಿ ನಾನು ಸ್ವಳಕ್ಕೆ ಬಂದು ಕ್ರಮ ತೆಗೆದುಕೊಳ್ಳಲಿಕ್ಕೂ ಸಿದ್ಧನಾಗಿದ್ದೇನೆ. ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ನನಗೆ ತಿಳಿಸಬೇಕು. ನಾನು ರೂಲ್ಸ್ ಪ್ರಕಾರ ಏನುಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಬೆಂಗಳೂರು ವಿಭಾಗಾಧಿಕಾರಿಗಳ ಕಛೇರಿಯಲ್ಲಿ ಈಗ ಸುಮಾರು ೩೧ ಜನರ ರೆಕಾರ್ಡ್‌ಗಳು ಇವೆ

ಶ್ರೀ ಚೌಡ ರೆಡ್ಡಿ.—ಈಗ ಹೊಸದಾಗಿ ಯಾರು ಯಾರು ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೆ ಅಂತಹ ಜಮೀನನ್ನು ಅವರಿಗೆ ಮಂಜೂರು ಮಾಡುವುದಕ್ಕಾಗುವುದಿಲ್ಲವೆಂದು ಎಲ್ಲ ಕಡೆಯೂ ಹೇಳುತ್ತಿದ್ದಾರೆ. ಇದಕ್ಕೆ ತಾವು ಏನು ಹೇಳುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.—ಇದಕ್ಕೆ ಅವಕಾಶವಿದ್ದ ಕಾನೂನನ್ನು ವಾಪಸ್ ತೆಗೆದು ಕೊಂಡಿರುವುದು ನಿಜ. ಈ ಹಿಂದೆ ನಿಜವಾಗಿಯೂ ಯಾರು ಯಾರು ಆಕ್ರಮವಾಗಿ ಸಾಗುವಳಿ ಮಾಡುತ್ತಿದ್ದರು, ಅಂತಹವರ ಹೆಸರಿನಲ್ಲಿ ರೆಕಾರ್ಡ್‌ಗಳು ತಯಾರಾಗಿದ್ದರೇ ಇದು ಅವರಿಗೆ ಅನ್ವಯವಾಗುವುದಿಲ್ಲ. ಆದರೆ ಹೊಸದಾಗಿ ಬಗರ ಹುಕುಂ ಸಾಗುವಳಿ ಮಾಡುವವರಿಗೆ ಮಂಜೂರು ಮಾಡುವುದನ್ನು ನಿಸಿಲ್ಲದೆ ಇವೆ.

ಅಧ್ಯಕ್ಷರು.—ಪ್ರಶ್ನೋತ್ತರ ಕಾಲ ಮುಗಿಯಿತು.

CALLING ATTENTION TO MATTERS OF URGENT PUBLIC IMPORTANCE.

(*i*) *re: non Supply of power for street lights and irrigation pumpsets.*

Mr. SPEAKER.—We will take up the Call-attention notices of Sriyuths Prabhakar Telkhar and S. M. Sheernally Chandrashekar after some time when the Hon'ble Chief Minister is here.

SRI ANDANAIAH (Kunigal).—Sir, I call the attention of the Minister of State for Information and Youth Services to the hardship being caused to the general public and the agriculturists due to non-supply of power for street lights and irrigation pumpsets.

SRI H. C. SRIKANTAIAH (Minister for Municipal Administration).—Sir, on behalf of the Minister of State for Information and Youth Services, I wish to make the following statements.—

My attention has been called to the hardships caused to the general public and the agriculturists due to the non-supply of power to the street lights and irrigation pumpsets financed by the Land Development banks, The following statement I wish to make, in this behalf.

Out of the 2764 I.P. applicants, who have given installation completion reports 273 applicants have availed loan facilities from Primary Land Development Banks all over the State. Departmental portion of work for arranging power supply for 1444 I.P. sets, which include 159 I.P. sets of loan facilities from Primary Land Development Banks is under progress and these I.P. sets will be serviced shortly.

The reason for the delay in energisation of pumpsets and arranging power supply to street lights is mainly non-availability of essential materials. Even though the Board had taken timely action to place orders on suppliers for the supply of ACSR conductors, distribution transformers, DOLO cutouts, GOS, insulators, G.I. wire etc., to meet the requirements for the year 1978-79, some of the suppliers have failed to supply the full quantity against the pending orders. Further, there was inordinate delay in supply of important essential line materials like pin insulators, guy wire etc., by certain firms at Calcutta due to unprecendented floods in and around Calcutta. However, every effort will be made to service the pending I.P. sets and street lights early.

ಶ್ರೀ ಆಂದಾನಯ್ಯ.—ಸ್ವಾಮಿ, ಈಗಾಗಲೇ ಸಣ್ಣಪುಟ್ಟ ರೈತರು ಭೂ ಅಭಿವೃದ್ಧಿ ಬ್ಯಾಂಕ್‌ನಲ್ಲಿ ಸಾಲ ಪಡೆದು ಪಂಪ್‌ಸೆಟ್ಟುಗಳನ್ನು ಇನ್‌ಸ್ಟಾಲ್ ಮಾಡಿದ್ದಾರೆ. ಆದರೆ ಪವರ್‌ನ್ನು ಇನ್ನೂ ಒದಗಿಸಿಲ್ಲ. ಕೆಲವರು ಇನ್‌ಸ್ಟಾಲ್ ಮಾಡಿಸಿ ೨-೩ ವರ್ಷಗಳಾಗಿದೆ. ಈಗಾಗಲೇ ಸಾಲ ಕೊಟ್ಟ ಬ್ಯಾಂಕ್‌ನವರು ಕಂತುಗಳನ್ನು ವಸೂಲಿ ಮಾಡುತ್ತಿದ್ದಾರೆ. ಸರ್ಕಾರದವರು ಪವರ್ ಸಪ್ಲೈ ಮಾಡದಿದ್ದರೆ ಅವರು ಕಂತುಗಳನ್ನು ಯಾವ ರೀತಿ ಪಾವತಿ ಮಾಡಬೇಕು?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಈ ದೂರುಗಳು ಸರ್ಕಾರದ ಗಮನಕ್ಕೂ ಬಂದಿವೆ. ಕೆಲವು ಕಡೆ ಗಳಲ್ಲಿ ರೈತರು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಲ್ಲಿ ಸಾಲ ಪಡೆದು ಪಂಪ್ ಸೆಟ್ಟುಗಳನ್ನು ಇನ್ ಸ್ಟಾಲ್ ಮಾಡಿದ್ದಾರೆ. ಆದರೆ ಅವುಗಳಿಗೆ ಸರ್ವೀಸ್ ಕೊಡುವುದಕ್ಕೆ ಇನ್ನೂ ಆಗಿಲ್ಲ. ಇದಕ್ಕೆ ಕಾರಣ ಗಳೇನೆಂಬುದನ್ನು ಈ ನನ್ನ ಸ್ಟೇಟ್‌ಮೆಂಟ್‌ನಲ್ಲಿ ತಿಳಿಸಿದ್ದೇನೆ. ಈ ಬಗ್ಗೆ ಸರ್ಕಾರ ಜಾಗ್ರತೆ ತೀರ್ಮಾನ ಕೈಕೊಳ್ಳುತ್ತದೆ ಮತ್ತು ಮುಂದೆ ಪವರ್ ಸಪ್ಲೈ ಮಾಡುವಾಗ ಮೊದಲನೆಯ ಪ್ರಾಧಾನ್ಯತೆಯನ್ನು ಈ ಐ.ಪಿ. ಸೆಟ್ಟುಗಳಿಗೆ ಕೊಡುತ್ತೇವೆ.

ಶ್ರೀ ಆಂದಾನಯ್ಯ —ಅಲ್ಲಿ ಬೀದಿ ದೀಪಗಳೂ ಸಹ ಇಲ್ಲ. ಕಂಬಗಳನ್ನು ನೆಟ್ಟು ೫-೬ ವರ್ಷಗಳಾಗಿದೆ. ಕೆಲವು ಕಡೆಗಳಲ್ಲಿ ಕಂಬಗಳಿಗೆ ಗೆದ್ದಲು ಹಿಡಿದಿದೆ. ಮಾನ್ಯ ಮಂತ್ರಿಗಳು ಜಾಗ್ರತೆ ಕೆಲಸ ಮಾಡುತ್ತೇವೆಂದು ಹೇಳಿದರು. ಎಷ್ಟು ಜಾಗ್ರತೆ ಎಂಬುದನ್ನು ತಿಳಿಸುತ್ತಾರೆಯೇ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಆದಷ್ಟು ಜಾಗ್ರತೆ ಮಾಡುತ್ತೇವೆ. ನಮಗೆ ಬೇಕಾದ ಮೆಟೀರಿ ಯಲ್‌ಗಳನ್ನು ಒದಗಿಸತಕ್ಕಂಥ ಸಂಸ್ಥೆ ಕಲ್ಕತ್ತಾ ಸಿಟಿಯಲ್ಲಿದ್ದು, ಅಲ್ಲಿ ಇತ್ತೀಚೆಗೆ ಪ್ಲಡ್ಸ್ ಬಂದ ಕಾರಣ, ಅವರಿಗೆ ಸಮಂಯಕ್ಕೆ ಸರಿಯಾಗಿ ಮೆಟೀರಿಯಲ್ಸ್‌ನ್ನು ನಮಗೆ ಒದಗಿಸುವುದಕ್ಕೆ ಆಗಿಲ್ಲ. ಈಗ ಸಪ್ಲೈ ಮಾಡುತಿ ದ್ದಾರೆ. ಆದ್ದರಿಂದ ಎಲೆ ಲ್ಲಿ ಈಗ ಕಂಬಗಳನ್ನು ಹಾಕಲಾಗಿದೆ, ಅಲ್ಲಿ ಮೊದಲು ತಂತಿಯನ್ನು ಎಳೆಯಲು ಸರ್ಕಾರ ಕ್ರಮ ಕೈಕೊಳ್ಳುತ್ತದೆ.